ಶ್ರೀ ಗಂಗಾಧರಪ್ಪ.—ಈಗ ಟನಲ್‌ನಲ್ಲಿ ಇರುವ ೩ ಶಿಫ್ಟ್‌ಗಳ ಜೊತೆ ಇನ್ನೂ ೩ ಶಿಫ್ಟ್‌ಗಳನ್ನು ತೆಗೆಯಬೇಕೆಂದು ಸರ್ಕಾರದ ಗಮನದಲ್ಲಿ ಇದೆಯೇ ?

ಶ್ರೀ ಎಚ್.ಡಿ. ದೇವೆಗೌಡ.—ಮತ್ತೆ ಒಂದು ಶಿಫ್ಟ್ ಮಾಡುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ಯೋಜನೆಯ ಮೇಲುಮಟ್ಟದ ಹಾಗೂ ಕೆಳ ಮಟ್ಟದ ಕಾಲುವೆಗಳಿಗೆ ಒಡ್ಡುಗಳ ನಿರ್ಮಾಣ

೮೫ (೧೪೧) ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:–

೧) ತುಂಗಭದ್ರಾ ಯೋಜನೆಯ ಬಲದಂಡೆಯ ಮೇಲ್ಮಟ್ಟದ ಕಾಲುವೆ ಮತ್ತು ಕೆಳಮಟ್ಟದ ಕಾಲುವೆಗಳ ನೀರು ಹಗರಿ ನದಿಗೆ ಸೇರುವುದನ್ನು ತಡೆಗಟ್ಟಿ, ನೀರಾವರಿಗೆ ಉಪಯೋಗಿಸುವ ಸಲುವಾಗಿ ಹಾಗೂ ಪಿಕಪ್‌ಗಳನ್ನು ಕಟ್ಟುವ ಸಲುವಾಗಿ ೧೯೮೨–೮೩ ಮತ್ತು ೧೯೮೩–೮೪ನೇ ಸಾಲಿನ ಬಜೆಟ್ಟಿನಲ್ಲಿ ಹಣವನ್ನು ನಿಗದಿಪಡಿಸಲಾಗಿದೆಯೇ?

೨) ಒಂದು ವೇಳೆ ಹಣ ಕೊಟ್ಟಿದ್ದರೆ ೧೯೮೨–೮೩ ಮತ್ತು ೧೯೮೩–೮೪ನೇ ಸಾಲಿನಲ್ಲಾ ಕೊಟ್ಟ ಗ್ರಾಂಟ್ ಎಷ್ಟು ? ಮತ್ತು ಖರ್ಚು ಮಾಡಿರುವ ಹಣವೆಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

೧) ಪಿಕಪ್‌ಗಳನ್ನು ಕಟ್ಟುವ ಸಲುವಾಗಿ ಪ್ರತ್ಯೇಕವಾಗಿ ಎರಡು ಸಾಲಿನಲ್ಲಿ ಹಣವನ್ನು ಮಂಜೂರು ಮಾಡಿರುವುದಿಲ್ಲ.

೨) ಆದರೂ ಒಟ್ಟಾರೆ ಮಂಜೂರು ಮಾಡಿರುವ ಎಂ.ಎಚ್. ೫೩೫ ಬಜೆಟ್ ಹಣದಲ್ಲಿ ''ಕಮರಜೋಡು'' ಮತ್ತು ''ಎರೆ ಹಳ್ಳ'' ಪಿಕಪ್‌ಗಳ ಸಲುವಾಗಿ ೧೯೮೨–೮೩ ಸಾಲಿನಲ್ಲಿ ರೂ. ೨.೦೬ ಲಕ್ಷಗಳನ್ನು ಮತ್ತು ೧೯೮೩–೮೪ ಸಾಲಿನಲ್ಲಿ ರೂ. ೦.೫೧ ಲಕ್ಷವನ್ನು ವೆಚ್ಚ ಮಾಡಲಾಗಿದೆ.

ಶ್ರೀ ಎಂ. ರಾಮಪ್ಪ.— ಅಧ್ಯಕ್ಷರೆ, ಈ ಪಿಕಪ್‌ಗಳನ್ನು ಪೂರ್ತಿ ಮಾಡಲು ಇನ್ನೂ ಎಷ್ಟುವರ್ಷ ಬೇಕಾಗುತ್ತದೆ?

ಶ್ರೀ ಹೆಚ್. ಡಿ. ದೇವೇಗೌಡ.— ವರ್ಷಗಳು ಬೇಕಾಗುವುದಿಲ್ಲ. ಮಾನ್ಯ ಸದಸ್ಯರು ಸ್ವಲ್ಪ ಲ್ಯಾಂಡ್‌ನ್ನು ಕೊಡಿಸಿಕೊಡುವುದಕ್ಕೆ ಪ್ರಯತ್ನ ಮಾಡುವುದಾದರೆ ಈ ಕ್ರಾಪ್ ಇಯರ್ ಎಂದರೆ ಜುಲೈನಲ್ಲಿ ಕೆಲಸ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ರಾಮಪ್ಪ.— ತಾವು ಹಣವನ್ನು ಕೊಡದಿದ್ದರೆ ಸ್ಥಳ ಎಲ್ಲಿ ಸಿಗುತ್ತದೆ? ತಾವು ಆ ಬಗ್ಗೆ ಹಣ ಕೊಡದೇ ಕೆಲಸ ಹೇಗೆ ಆಗುತ್ತದೆ?

ಶ್ರೀ ಹೆಚ್. ಡಿ. ದೇವೇಗೌಡ.— ನಾನು ಈ ಮೂಲಕ ಅವರಿಗೆ ಆಶ್ವಾಸನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಲ್ಯಾಂಡ್ ಪ್ರಾಬ್ಲಮ್ ಇಲ್ಲದೇ ನಮಗೆ ಸ್ಥಳ ಸಿಗುವುದಾದರೆ ಈ ಎರಡು ಯೋಜನೆಗಳಿಗೂ ಎಷ್ಟು ಹಣ ಒದಗಿಸಿಕೊಡಬೇಕೋ ಅಷ್ಟನ್ನೂ ಒದಗಿಸಿ ಜುಲೈ ಒಳಗೆ ಕೆಲಸ ಮುಗಿಸುವುದಕ್ಕಾಗಿ ಕೆಲಸ ಮಾಡುತ್ತೇವೆ.

ಶ್ರೀ ನಾಗನಗೌಡ ಪಾಟೀಲ್.— ಅಧ್ಯಕ್ಷರೇ, ಹಗರಿ ಆಕ್ವಿಡೆಟ್‌ನ ಕಾರ್ಯ ಕಳೆದ ೩ ತಿಂಗಳುಗಳಿಂದ ನಿಂತಿದೆ. ಅಲ್ಲಿಂದೀಚೆಗೆ ಏನೂ ಕೆಲಸ ಆಗಿಲ್ಲ. ಸರ್ಕಾರದವರೇ ದುರುದ್ದೇಶದಿಂದ ಈ ಕೆಲಸವನ್ನು ನಿಲ್ಲಿಸಿದ್ದಾರೆನ್ನುವ ಭಾವನೆ ಜನರಲ್ಲಿ ಮೂಡಿದೆ. ಆದ್ದರಿಂದ ತಾವೇ ಇದನ್ನು ಕೈಗೆತ್ತಿಕೊಂಡು ಕೆಲಸವನ್ನು ಪೂರ್ತಿ ಮಾಡಲು ಸಾಧ್ಯವಿಲ್ಲವೆ?

ಶ್ರೀ ಹೆಚ್. ಡಿ. ದೇವೇಗೌಡ.— ಬಲ ಭಾಗದ ನಾಲೆಯಿಂದ ಹೋಗುವ ಹಗರಿ ಆಕ್ವಿಡೆಟ್‌ನ ಸ್ಥಳ ಪರಿಶೀಲನೆ ಮಾಡಲಾಗಿದೆ. ಆದರ ಕೆಲಸ ಹೇಗೆ ನಡೆದುಕೊಂಡು ಬಂದಿದೆ ಎಂದು ಹೇಳುವುದಾದರೆ

ಇಲ್ಲಿ ಹಿಂದಿನ ಸರ್ಕಾರದ ದೋಷಗಳನ್ನು ಹೆಳಬೆ ಕಾಗುತ್ತದೆ. ಆದರ ಆವಶ್ಯಕತೆ ಈಗ ಇಲ್ಲ. ಅಲ್ಲಿಯ ಸ್ಥಳೀಯ ಅಧಿಕಾರಿಗಳ ಜೊತೆ ಹಾಗೂ ಕಾಂಟ್ರಾಕ್ಟರ್ ಜೊತೆ ಕುಳಿತು ಸಮಾಲೋಚನೆ ಮಾಡಿದಾಗ ಇನ್ನು ೧೦ ವರ್ಷದಲ್ಲಿ ಆದನ್ನು ಮುಗಿಸುತ್ತೇವೆನ್ನುವ ಆಶ್ವಾಸನೆಯನ್ನು ಕೊಟ್ಟರು. ಇನ್ನೂ ಒಂದು ಅವಕಾಶ ಕೊಡಬೆ ಕೆಂದು ಹೆಳಿದಾಗ ನಾನು ವೈಯಕ್ತಿಕವಾಗಿ ಮಂತ್ರಿಯಾಗಿ ನೋಡೋಣವೆಂದು ಹೇಳಿದೆ. ಆದರೆ ಟೆಕ್ನಿಕಲ್ ಕಮಿಟಿ ಹಾಗೂ ಮೇಜರ್ ಇರಿಗೇಷನ್ ಟೆಕ್ನಿಕಲ್ ಕೋರ್ಡಿನವರು ಅವರಿಗೆ ಅವಕಾಶ ಕೊಡುವುದಕ್ಕಾಗುವುದಿಲ್ಲವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದುದರಿಂದ ಇದನ್ನು ಡಿಪಾರ್ಟ್‌ಮೆಂಟಲ್ ವೈಸ್ ಮಾಡುವುದೇ ಅಥವಾ ಬೇರೆ ಏಜೆನ್ಸಿಗೆ ಕೊಡ ಬೇಕೋ ಎಂಬ ಬಗ್ಗೆ ಸೂಚನೆ ಕೊಡಲಾಗಿದೆ. ಅವರ ಒಂದು ಒಪಿನಿಯನ್‌ನ್ನು ಓವರ್‌ರೂಲ್ ಮಾಡಿ ಬೇರೆ ನಿರ್ಧಾರ ಮಾಡಿದರೆ ಕಾಂಟ್ರಾಕ್ಟರ್‌ರವರಿಗೆ ಮೆಹರಬಾನಿ ತೋರಿಸಿದಹಾಗೆ ಆಗುತ್ತದೆ. ಆ ಆಪಾದನೆಗೆ ನಾನು ಗುರಿಯಾಗಬೇಕಾಗುತ್ತದೆ.

ಶ್ರೀ ಬಸವರಾಜ ಪಾಟೀಲ್.— ಟೇಲ್‌ಎಂಡ್‌ನಲ್ಲಿರತಕ್ಕ ಜನರಿಗೆ ಬೇರೆಡೆ ಪಿಕ್ ಅಪ್ ಕಟ್ಟುವ ಬಗ್ಗೆ ತಮ್ಮ ಕಡೆ ಪ್ರಪೋಸಲ್ ಬಂದಿದೆಯೇ? ಬಂದಿದ್ದರೆ ಆದರ ಬಗ್ಗೆ ಹಣ ಕೊಡುತ್ತೀರಾ?

ಶ್ರೀ ಹೆಚ್. ಡಿ. ದೇವೇಗೌಡ.— ಇನ್ನೂ ೧೦ ಪಿಕ್‌ಅಪ್ ಮಾಡಲಿಕ್ಕೆ ಸಾಧ್ಯ ಎಂದು ಇದೆ. ಆ ೧೦ ಪಿಕ್‌ಅಪ್‌ಗಳಿಗೆ ೬೦ ಲಕ್ಷ ರೂಪಾಯಿ ಹಣ ಬೇಕು. ಈ ಕೊರತೆಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ, ಈ ಬಗ್ಗೆ ನೋಡಿಕೊಂಡು ಕೆಲಸ ಮಾಡಬೇಕಾಗಿದೆ.

ಶ್ರೀ ಸುಧೀಂದ್ರರಾವ್ ಕನಬೆ.— ತುಂಗಭದ್ರಾ ಜಲಾಶಯದ ಕೆಳಗೆ ರಾಯಚೂರು ಎಡದಂಡೆ ಕಾಲುವೆಯಲ್ಲಿ ಬ್ರೀಚ್ ಆಗತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಮೈನ್ ಕೆನಾಲ್‌ಗಾಗಿ ೧೯೮೨-೮೩-ಆಳರ ಬಜೆಟ್‌ನಲ್ಲಿ ಎಷ್ಟು ಹಣ ವಿಾಸಲಾಗಿಟ್ಟಿದ್ದೀರಿ.

ಅಧ್ಯಕ್ಷರು.— ಅದು ಒಡ್ಡಿಗೆ ಸಂಬಂಧಪಟ್ಟ ಪ್ರಶ್ನೆ.

ಶ್ರೀ ಹೆಚ್.ಡಿ. ದೇವೇಗೌಡ — ಇದು ಎರಡು ಪಿಕ್‌ಅಪ್‌ಗಳಿಗೆ ಸಂಬಂಧಪಟ್ಟದ್ದು. ಎಡದಂಡೆ ನಾಲೆ, ವಿಚಾರದ ಬಗ್ಗೆ ಹೆಳಬೇಕೆಂದರೆ, ಅಧ್ಯಕ್ಷರು ಅದಕ್ಕೆ ಅವಕಾಶ ಕೊಟ್ಟರೆ ಹೆಳುತ್ತೇನೆ.

ಅಧ್ಯಕ್ಷರು.— ಮಾನ್ಯ ಸದಸ್ಯರಾದ ಶ್ರೀ ಸುಧೀಂದ್ರರಾವ್ ಅವರು ಆದರ ಬಗ್ಗೆ ಬೇರೆ ಪ್ರಶ್ನೆ ಕೆಳಬೇಕು.

ಶ್ರೀ ಬಸವರಾಜ್ ಪಾಟೀಲ್.— ಎಡದಂಡೆ ನಾಲೆಯಲ್ಲಿ ಹರಿದುಹೋಗತಕ್ಕ ನೀರಿಗೆ ಪಿಕ್‌ಅಪ್‌ಗಳನ್ನು ಕಟ್ಟುವ ಬಗ್ಗೆ ಹಿಂದಿನ ಸರ್ಕಾರ ವಿಚಾರ ಮಾಡಿತ್ತು. ಅವುಗಳ ಬಗ್ಗೆ ಏನಾಗಿದೆ ಎಂಬುದನ್ನು ಮಂತ್ರಿಗಳು ತಿಳಿಸುತ್ತಾರೆಯೇ?

ಶ್ರೀ ಹೆಚ್. ಡಿ. ದೇವೇಗೌಡ.— ಹಿಂದಿನ ಸರ್ಕಾರ ಯಾವುದು ಮಾಡಬೇಕೆಂದು ತೀರ್ಮಾನ ಮಾಡಿತ್ತು ನನಗೆ ಗೊತ್ತಿಲ್ಲ.

ಶ್ರೀ ಬಸವರಾಜ್ ಪಾಟೀಲ್.— ತಮ್ಮ ಗಮನಕ್ಕೆ ಬಂದಿಲ್ಲದೇ ಇರಬಹುದು, ಅಧಿಕಾರಿಗಳಿಂದ ರೆಕಾರ್ಡ್ಸ್ ತರಿಸಿನೋಡಿದರೆ ಗೊತ್ತಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.— ನಾನು ತರಿಸಿ ನೋಡಿದ್ದೇನೆ. ೧೯೫೬ರ ನಂತರ ಸ್ಟೇಟ್ ರೀ ಆರ್ಗನೈಸೇಷನ್ ಆಗಿ ಆ ಭಾಗ ಬಂದಮೇಲೆ ಅಲ್ಲಿ ಏನಾಗಿದೆ ಎಂದು ಯಾವ ಸರ್ಕಾರವೂ ನೋಡಿಲ್ಲ. ನಮ್ಮ ಸರ್ಕಾರ ಬಂದಮೆಲೆ ೧೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡು, ಈ ವರ್ಷ ಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮೂರು ವರ್ಷದಲ್ಲಿ ಮುಗಿಸಬೇಕೆಂದು ತೀರ್ಮಾನ ಕೈಗೊಂಡಿದ್ದೇವೆ.

ಶ್ರೀ ಬಸವರಾಜ್ ಪಾಟೀಲ್.— ಹಿಂದಿನ ಸರ್ಕಾರ ಪಿಕ್‌ಅಪ್ ಕೆಲಸಗಳಲ್ಲಿ ಸಿಂಧಗಿ ಮತ್ತು ಮಾನ್ವಿ ತಾಲ್ಲೂಕುಗಳಲ್ಲಿ ಎರಡು ಮೂರು ಯೋಜನೆಗಳನ್ನು ಕೈಗೆ ಎತ್ತಿಕೊಂಡಿದ್ದು ನಮ್ಮ ಗಮನಕ್ಕೆ ಬಂದಿದೆ. ಆ ಯೋಜನೆಗಳನ್ನು ಯಾವಾಗ ಪೂರೈಸುತ್ತೀರಾ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.— ಇನ್ನೂ ೧೦ ಪಿಕ್‌ಅಪ್‌ಗಳನ್ನು ಮಾಡಲಿಕ್ಕೆ ಸಾಧ್ಯವಿದೆ. ಅದಕ್ಕೆ ೬೦ ಲಕ್ಷ ರೂಪಾಯಿ ಹಣ ಬೇಕು. ಹಣದ ಆವಶ್ಯಕತೆಯನ್ನು ಅವಲಂಬಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಎಲ್ಲವನ್ನೂ ಒಟ್ಟಿಗೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ರಾಮಪ್ಪ.— ಕೆಲವು ರೈತ ಸಂಘದ ಅಧ್ಯಕ್ಷರು ಪಿಕ್‌ಅಪ್‌ಗಳನ್ನು ಮಾಡಿದರೆ ಟೋಲ್ ಎಂಡ್‌ನಲ್ಲಿರತಕ್ಕ ನಮ್ಮ ೪೦ ಎಕರೆ ಆಯಕಟ್ಟಿಗೆ ನೀರು ಸಿಕ್ಕುವುದಿಲ್ಲ ಎಂದು ಹೇಳಿದ್ದಾರೆ ಅದಕ್ಕೊಸ್ಕರ ಮಾಡುತ್ತಿಲ್ಲ ಎನ್ನುವ ಅನುಮಾನ ನಮ್ಮ ತಾಲ್ಲೂಕಿನಲ್ಲಿ ಬಂದಿದೆ ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ?

ಶ್ರೀ ಹೆಚ್. ಡಿ. ದೇವೇಗೌಡ.— ರೈತ ಸಂಘದವರು ಸಮಸ್ಯೆ ಇತ್ತೀಚಿನ ಸಮಸ್ಯೆ. ಪಿಕ್‌ಅಪ್ ಕಟ್ಟುತಕ್ಕ ವಿಚಾರ ಮೊದಲಿನಿಂದಲೂ ಇದೆ.

ಶ್ರೀ ಎಂ. ರಾಮಪ್ಪ.— ಇವೊತ್ತು ರೈತ ಸಂಘದವರು ಹೇಳತಕ್ಕದ್ದರ ಬಗ್ಗೆ ಒಪ್ಪಿಕೊಂಡಿದ್ದಾರೆ ಎನ್ನುವ ಅನುಮಾನ ಬಂದಿದೆ. ಆದ್ದರಿಂದ ಈ ವಿಚಾರವನ್ನು ಕೇಳಬೇಕಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.— ಅವರು ಹೇಳುವುದು ಕೇಳಬಾರದು ಎಂದು ಅಲ್ಲ. ಅವರು ಹೇಳುವುದು ಯೋಗ್ಯವಿದ್ದರೆ ಅವರು ಹೇಳುವುದನ್ನು ಸ್ವೀಕಾರ ಮಾಡಬೇಕಾಗುತ್ತದೆ. ಸನ್ಮಾನ್ಯ ಸದಸ್ಯರು ಹೇಳುವುದನ್ನು ಪರಿಗಣಿಸಲಿಕ್ಕೆ ಸಿದ್ಧರಿದ್ದೇವೆ. ಅವರಿಗೆ ಅನುಕೂಲ ಮಾಡಿಕೊಡಬೇಕೆಂಬುದು ಇಲ್ಲ. ಹಣದ ತೊಂದರೆಯಿಂದ ಎಲ್ಲಾ ಪಿಕ್‌ಅಪ್ ಒಟ್ಟಿಗೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಈಗ ಎರಡು ಪಿಕ್‌ಅಪ್‌ಗಳನ್ನು ಮಾಡಲಿಕ್ಕೆ ಹಣ ಎಷ್ಟು ಬೇಕೋ ಅಷ್ಟು ಕೊಡಲಿಕ್ಕೆ ಸಿದ್ಧರಿದ್ದೇವೆ. ಮಾನ್ಯ ಸದಸ್ಯರು ಲ್ಯಾಂಡ್ ಅಕ್ವಿಸಿಷನ್‌ಗೆ ಸಹಕರಿಸಿದರೆ ಸಾಕು.

ಶಿವಮೊಗ್ಗಾ ಮೈಕಾ ಮ್ಯಾಚ್ ಕಂಪನಿ ವಿಚಾರ

೮೬ (೧೯೧) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಶಿವಮೊಗ್ಗೆಯ ಮ್ಯಾಚ್ ಕಂಪನಿಯಲ್ಲಿ ಸರ್ಕಾರದವರ ಷೇರು ಭಾಗ ಎಷ್ಟು?

ಆ) ವಿಮ್ಕೋ ಕಂಪನಿಗೆ ಯಾವಾಗ ಹಾಗೂ ಎಷ್ಟು ವರ್ಷಗಳವರೆಗೆ ಗುತ್ತಿಗೆ ನೀಡಲಾಗಿತ್ತು? ಯಾವಾಗ ಗುತ್ತಿಗೆ ಅವಧಿ ಮುಗಿದಿದೆ?

ಇ) ವಿಮ್ಕೋದವರು ಕೇರಳದ ಒಂದು ಪ್ಲೈವುಡ್ ಕಂಪನಿಗೆ ಮೂರು ಗುತ್ತಿಗೆ ಕೊಟ್ಟಿರುವುದು ನಿಜವೆ?

ಈ) ವಿಮ್ಕೋದಿಂದ ಸರ್ಕಾರಕ್ಕೆ ಎಷ್ಟು ಹಣ ಗುತ್ತಿಗೆ ಬರಬೇಕಾಗಿದೆ?

ಶ್ರೀ ಜಿ. ವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಅಧಿಕೃತ ಷೇರು ಬಂಡವಾಳ ... ೧೦ ಲಕ್ಷ ರೂ.

ಒಟ್ಟು ಪಾವತಿಯಾಗಿರತಕ್ಕ ಷೇರು ಬಂಡವಾಳದ ವಿವರಗಳು:

೧) ಕೆ. ಎಸ್. ಎಫ್. ಐ. ಸಿ. — ೨೯೪೫೫ ಷೇರುಗಳು — ಪ್ರತಿಯೊಂದು ರೂ. ೧೦ರ ಮೊಬಲಗು	...	೨,೯೪,೫೫೦-೦೦ ಶೇಕಡ ೫೯
೨) ಕರ್ನಾಟಕ ಸರ್ಕಾರ ರೂ. ೧೦ರ ೫೦೦೦ ಷೇರುಗಳು	...	೫೦,೦೦೦-೦೦ ಶೇಕಡ ೧೦
೩) ಸಾರ್ವಜನಿಕರಿಂದ ರೂ. ೧೦ರ ೧೫೩೨೪ ಷೇರುಗಳು	...	೧,೫೩,೨೪೦-೦೦ ಶೇಕಡ ೩೧
ಒಟ್ಟು ರೂ.		೪,೯೫,೨೯೦-೦೦